**ಅ.ದಾವಾ ನಂ. 336/15** **ಡಿ.ಡಬ್ಲ್ಯೂ-2**

**ದಿನಾಂಕ 22/01/2021 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜೆ.ಯು.ಆರ್. ವಕೀಲರಿಂದ**

ವಾದಿ - ಪ್ರತಿವಾದಿಯರು ನನಗೆ ಹುಟ್ಟಿದಾಗಿನಿಂದಲೂ ಗೊತ್ತು. ಸರ್ವೆ ನಂ. 79/1 ರ ಜಮೀನಿಗೆ ಸಂಬಂಧಿಸಿದಂತೆ ದಾವೆ ನಡೆಯುತ್ತಿದೆ. ಸಾಕ್ಷಿ ತಮ್ಮ ಅಂಗೈಯಲ್ಲಿ ಸರ್ವೆ ನಂಬರ್ ಬರೆದುಕೊಂಡು ಬಂದಿರುತ್ತಾರೆ. ದಾವಾ ಜಮೀನು 15 ಗುಂಟೆ ಇದೆ. ದಾವಾ ಜಮೀನಿನ ಪಹಣಿ ವಾದಿಯ ಹೆಸರಿನಲ್ಲಿದೆ. ದಾವಾ ಜಮೀನಿನ ಪೂರ್ವಕ್ಕೆ ನಂಜುಂಡಪ್ಪ, ಪಶ್ಚಿಮಕ್ಕೆ ಶಿವಣ್ಣ, ಉತ್ತರಕ್ಕೆ ಅಣ್ಣಾಜಪ್ಪ ಮತ್ತು ದಕ್ಷಿಣಕ್ಕೆ ರುದ್ರಪ್ಪನವರ ಮನೆ ಇದೆ. ವಾದಿ -ಪ್ರತಿವಾದಿಯರಿಗೆ ದಾವಾ ಜಮೀನು ಪಿತ್ರಾರ್ಜಿತವಾಗಿ ಬಂದಿದೆ. ದಾವಾ ಜಮೀನಿನ ಉತ್ತರ ದಿಕ್ಕಿಗೆ ನನ್ನ ಜಮೀನು ಇದೆ. ನನ್ನ ಜಮೀನು ಸರ್ವೆ ನಂ. 78/8. ಸದರಿ ಜಮೀನು ನನ್ನ ತಾಯಿ ಶಿವಮ್ಮನವರ ಹೆಸರಿನಲ್ಲಿದೆ. ವಾದಿಯು ದಾವಾ ಜಮೀನಿನ ಸ್ವಾಧೀನದಲ್ಲಿದ್ದರು ಸಹ ನಾನು ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**